

ರಾಜ್ಯಕ್ಕೆ ಮತ್ತೊಂದು ಕುಲಾಂತರಿ ತಳಿ ಪ್ರವೇಶ ವಿವಾದ!

ಹತ್ತಿ, ಮೆಕ್ಕೆಜೋಳ ಕುಲಾಂತರಿ ಬೀಜದ ಕ್ಷೇತ್ರ ಪ್ರಯೋಗಕ್ಕೆ ಅನುಮತಿ ಕೋರಿದ ರ್‍ಯಾಲಿಸ್ ಇಂಡಿಯಾ ಎಂಬ ಸಂಸ್ಥೆ

ಕುಲಾಂತರಿಗಳು ಪರಿಸರಕ್ಕೆ ಮಾರಕ, ಸ್ಥಳೀಯ ತಳಿ ನಾಶ: ರೈತರ ವಾದ | ಅನುಮತಿ ನೀಡದಂತೆ ಸರ್ಕಾರಕ್ಕೆ ಆಗ್ರಹ

• **ವಿಶೇಷ ವರದಿ**
ಕನ್ನಡಪ್ರಭ ವಾರ್ತೆ ಬೆಂಗಳೂರು

ಮೊನ್ಸಾಂಟೊ ಕಂಪನಿಯ ಕುಲಾಂತರಿ ಹತ್ತಿಗೆ ಅನುಮತಿ ನೀಡಿದ ದಶಕಗಳ ನಂತರ ಇದೀಗ ಮತ್ತೊಂದು ಖಾಸಗಿ ಕಂಪನಿಯ ಕುಲಾಂತರಿ ಹತ್ತಿ ಹಾಗೂ ಕುಲಾಂತರಿ ಮೆಕ್ಕೆಜೋಳಕ್ಕೆ ರಾಜ್ಯದಲ್ಲಿ ಅನುಮತಿ ನೀಡಲು ಸರ್ಕಾರ ಮುಂದಾಗಿದ್ದು, ಇದರ ಬಗ್ಗೆ ಆಕ್ರೋಶ ಭರಿತರಾಗಿರುವ ರೈತರು ಹೋರಾಟದ ಎಚ್ಚರಿಕೆ ನೀಡಿದ್ದಾರೆ.

ಕನ್ನಡಪ್ರಭ ವಿಶೇಷ

ರ್‍ಯಾಲಿಸ್ ಇಂಡಿಯಾ ಕಂಪನಿಯು ಜು.3 ರಂದು ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಬಿಟಿ ಹತ್ತಿ ಮತ್ತು ಮೆಕ್ಕೆಜೋಳದ ಕ್ಷೇತ್ರ ಪ್ರಯೋಗಕ್ಕೆ ಅನುಮತಿ ಕೋರಿರುವುದು ರೈತರ ಕಣ್ಣು ಕೆಂಪಗಾಗಿಸಿದೆ. ಪರಿಸರಕ್ಕೆ ಮಾರಕವಾಗಿರುವ ಈ ಕುಲಾಂತರಿ ತಳಿಗಳಿಗೆ ಯಾವುದೇ ಕಾರಣಕ್ಕೂ ಅನುಮತಿ ನೀಡಬಾರದು ಎಂದು ರೈತರು ಒತ್ತಾಯಿಸಿದ್ದಾರೆ.

2002ರಲ್ಲಿ ಮೊನ್ಸಾಂಟೊ ಕಂಪನಿಯ ಕುಲಾಂತರಿ ಬಿಟಿ ಹತ್ತಿಯನ್ನು ವಾಣಿಜ್ಯಕವಾಗಿ ಬೆಳೆಯಲು ರಾಜ್ಯ ಸರ್ಕಾರ ಅನುಮತಿ ನೀಡಿದ ಒಂದೆರಡು ವರ್ಷದಲ್ಲಿ ಸ್ಥಳೀಯರು ಬೆಳೆಯುತ್ತಿದ್ದ ಡಿಸಿಎಚ್-32, ಎನ್‌ಎಚ್-44, ಜಯಧರ, ಸುಯೋಧರ, ಅಪ್ಲಾಂಡ, ವರಲಕ್ಷ್ಮಿ, ಪಂಡರಾಪುರಿ ಮುಂತಾದ ಹತ್ತಿ ಬೀಜಗಳೆಲ್ಲಾ ಹೇಳಹೆಸರಿಲ್ಲದಂತೆ ನಾಶವಾದವು ಎಂಬ ಆತಂಕವನ್ನು ರೈತರು ವ್ಯಕ್ತಪಡಿಸಿದ್ದಾರೆ.

↘ 10

ಏನಿದು ವಿವಾದ?

ರ್‍ಯಾಲಿಸ್ ಇಂಡಿಯಾ ಎಂಬ ಕಂಪನಿ ಕರ್ನಾಟಕದಲ್ಲಿ ಕುಲಾಂತರಿ ಹತ್ತಿ ಹಾಗೂ ಮೆಕ್ಕೆಜೋಳ ಬೀಜದ ಕ್ಷೇತ್ರ ಪ್ರಯೋಗಕ್ಕೆ ಅನುಮತಿ ಕೋರಿದೆ. ಸರ್ಕಾರ ಇದಕ್ಕೆ ಅನುಮತಿ ನೀಡಲು ಮುಂದಾಗಿದೆ ಎನ್ನಲಾಗಿದ್ದು, ಅದಕ್ಕೆ ರೈತರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ಏಕೆ ವಿರೋಧ?

ಕುಲಾಂತರಿ (ಜಿ.ಎಂ.) ಬೀಜ ಕಂಪನಿಗಳು ಬೆಳೆ ವೈವಿಧ್ಯ ನಾಶಪಡಿಸಿ, ರೈತರನ್ನು ಆರ್ಥಿಕವಾಗಿ ತಮ್ಮ ಗುಲಾಮರನ್ನಾಗಿಸುತ್ತವೆ ಎಂಬ ಆರೋಪವಿದೆ. ಮೊನ್ಸಾಂಟೊ ಹತ್ತಿ ಬಂದ ಮೇಲೆ ಇತರ ಹತ್ತಿ ಬೆಳೆಗಳು ನಾಶವಾಗಿವೆ. ಹೀಗಾಗಿ ರ್‍ಯಾಲಿಸ್ ಕಂಪನಿಗೂ ವಿರೋಧ ವ್ಯಕ್ತವಾಗುತ್ತಿದೆ.

20+ ದೇಶಗಳಲ್ಲಿ ನಿಷೇಧ

20ಕ್ಕೂ ಅಧಿಕ ದೇಶಗಳು ಕುಲಾಂತರಿ ಬೆಳೆಗಳನ್ನು ಸಂಪೂರ್ಣ ನಿಷೇಧಿಸಿವೆ. ಯೂರೋಪಿನ 28 ದೇಶಗಳಲ್ಲಿ ಅರ್ಧಕ್ಕೂ ಹೆಚ್ಚು ದೇಶಗಳು ಕುಲಾಂತರಿ ಮುಕ್ತ ದೇಶಗಳಾಗಿವೆ. ನಮ್ಮ ದೇಶದಲ್ಲಿ ಬಿಟಿ ಹತ್ತಿಯ ಕೆಟ್ಟ ಪರಿಣಾಮಗಳನ್ನು ಕಂಡ ಎಲ್ಲಾ ರಾಜ್ಯಗಳು ಕುಲಾಂತರಿ ಬದನೆ ಮತ್ತು ಸಾಸಿವೆಗಳನ್ನು ಹೋರಾಡಿ ಹಿಮ್ಮೆಟ್ಟಿಸಿದವು. ಕೇರಳ, ತಮಿಳುನಾಡು, ಬಿಹಾರ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ, ಒಡಿಶಾ, ಗುಜರಾತ್ ಮತ್ತಿತರ ರಾಜ್ಯಗಳು ಬಹಳ ಹಿಂದೆಯೇ ಕುಲಾಂತರಿ ಕ್ಷೇತ್ರ ಪ್ರಯೋಗಗಳಿಗೆ ಅನುಮತಿ ಕೊಡದಿರಲು ತೀರ್ಮಾನಿಸಿವೆ. ಹೀಗಿರುವಾಗ ಕರ್ನಾಟಕ ಸರ್ಕಾರಕ್ಕೆ ಇದರ ಅನಿವಾರ್ಯತೆ ಇಲ್ಲ ಎಂದು ರೈತರು ಹೇಳಿದ್ದಾರೆ.

ಮತ್ತೊಂದು ಕುಲಾಂತರಿ ತಳಿ ಪ್ರವೇಶ ವಿವಾದ!

↙ ಮೊದಲ ಪುಟದಿಂದ

ಬಿಳಿಗಿರಿರಂಗನ ಬೆಟ್ಟದ ಸೋಲಿಗರು ಮತ್ತು ಬೆಳಗಾವಿಯ ರೈತರು ದೇಸಿ ತಳಿಯಾದ ಬಣ್ಣದ ಮುಸುಕಿನ ಜೋಳವನ್ನು ಇವತ್ತಿಗೂ ಬೆಳೆಯುತ್ತಿದ್ದಾರೆ. ಕುಲಾಂತರಿ ಮುಸುಕಿನ ಜೋಳ ಕೃಷಿಗೆ ಬಂದರೆ ದೇಸಿ ಮುಸುಕಿನ ಜೋಳದ ವೈವಿಧ್ಯ ನಾಶವಾಗುತ್ತದೆ. ಕುಲಾಂತರಿ ತಳಿಗಳು ಬೆಳೆ ವೈವಿಧ್ಯವನ್ನು ನಾಶಪಡಿಸುತ್ತವೆ. ಜನ, ಜಾನುವಾರು, ಹಕ್ಕಿಪಕ್ಷಿ, ಕೀಟಗಳನ್ನೂ ಒಳಗೊಂಡಂತೆ ಸಕಲ ಜೀವಜಂತುಗಳ ಆರೋಗ್ಯದ ಮೇಲೆ ಪರಿಣಾಮ ಉಂಟುಮಾಡುತ್ತವೆ ಎಂಬುದು ರೈತ ನಾಯಕರ ಆತಂಕ.

ಬೆಳೆ ವೈವಿಧ್ಯ ಕಾಪಾಡಲಿ: ಈಗಾಗಲೇ ಹತ್ತಿಯಲ್ಲಿ ಕಾಯಿಕೊರಕ ನಿಯಂತ್ರಣಕ್ಕೆ ಬಿಟಿ ಕುಲಾಂತರಿ ಬೀಜ ಇದೆ. ಹೀಗಿರುವಾಗ ಮತ್ತೊಂದು ಕುಲಾಂತರಿ ತಳಿಯ ಹತ್ತಿ ಏಕೆ? ಇಷ್ಟಕ್ಕೂ ಈ ಹೊಸ ಕಂಪನಿಯು ಯಾವ ಹೊಸ ಸಮಸ್ಯೆಗೆ ಸಂಬಂಧಿಸಿದಂತೆ ಕ್ಷೇತ್ರ ಪ್ರಯೋಗ ನಡೆಸುತ್ತಿದೆ ಎಂಬುದನ್ನು ಬಹಿರಂಗಪಡಿಸಲಿ ಎಂದು ರೈತರು ಆಗ್ರಹಿಸಿದ್ದಾರೆ.

ಹೊಸ ರೋಗಗಳು ಬಾಧಿಸಲಿದೆ

ಕ್ಷೇತ್ರ ಪ್ರಯೋಗಕ್ಕೆ ಅನುಮತಿ ನೀಡಿದರೆ ಬೀಜ ಮಾರುಕಟ್ಟೆಯಲ್ಲಿ ಏಕಸ್ವಾಮ್ಯಕ್ಕೆ ಅವಕಾಶ ಮಾಡಿಕೊಟ್ಟಂತಾಗಿ ಕಂಪನಿಯು ಮಾರುಕಟ್ಟೆಯನ್ನು ಕೈವಶ ಮಾಡಿಕೊಳ್ಳುತ್ತದೆ. ಹತ್ತಿ ಮತ್ತು ಮೆಕ್ಕೆಜೋಳಕ್ಕೆ ಹೊಸ ರೋಗಗಳು ಬಾಧಿಸಲಿದ್ದು, ಪರಿಸರಕ್ಕೂ ಅಪಾಯಕಾರಿಯಾಗಲಿದೆ. ಆದ್ದರಿಂದ ಸರ್ಕಾರ ಯಾವುದೇ ಕಾರಣಕ್ಕೂ ಪ್ರಯೋಗಕ್ಕೆ ಅನುಮತಿ ನೀಡಬಾರದು.

• **ಡಾ.ಪ್ರಕಾಶ್ ಕಮ್ಮರಡಿ** ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ

ಸರ್ಕಾರವು ರೈತರ ಬೀಜ ಸ್ವಾತಂತ್ರ್ಯ ಮತ್ತು ಬೆಳೆ ವೈವಿಧ್ಯವನ್ನು ಕಾಪಾಡಲು ಸಹಾಯಕವಾಗುವ ವಿವಿಧ ಹತ್ತಿ ಬೀಜಗಳನ್ನು ವಾಪಸ್ ತರುವ ನಿಟ್ಟಿನಲ್ಲಿ ಕೆಲಸ ಮಾಡಬೇಕೇ ಹೊರತು ಮತ್ತಷ್ಟು ಸರ್ವನಾಶದೆಡೆಗೆ ಕೊಂಡೊಯ್ಯುವ ಕುಲಾಂತರಿ ಬೀಜಗಳನ್ನಲ್ಲ ಎಂದು ಅವರು ಆಗ್ರಹಿಸುತ್ತಾರೆ.

ಹಲವು ಕಂಪನಿಗಳ ದುಬಾರಿ ಬೀಜಗಳನ್ನು ಬಳಸಿದ್ದರಿಂದ ಕಳೆದ ಎರಡು ದಶಕದಲ್ಲಿ ಕರ್ನಾಟಕದ ಬಹಳಷ್ಟು ವೈವಿಧ್ಯಮಯ ಆಹಾರ ಬೆಳೆಗಳನ್ನು ಮೆಕ್ಕೆಜೋಳ ನಾಶಪಡಿಸಿದೆ. ಅಧಿಕ ಇಳುವರಿಯನ್ನೇ ಕಂಪನಿಗಳು ಬಿಂಬಿಸುತ್ತಿದ್ದು, ಬೇಸಾಯಕ್ಕೆ ತಗಲುವ ಅಧಿಕ ಖರ್ಚು, ಬೆಳೆಗೆ ಕಡಿಮೆ ಬೆಲೆಯಿಂದ ರೈತರು ಅಪಾರ ನಷ್ಟಕ್ಕೆ ಒಳಗಾಗುತ್ತಿರುವುದನ್ನು ಮರೆಮಾಚಲಾಗುತ್ತಿದೆ ಎಂದು ಆರೋಪಿಸಲಾಗುತ್ತಿದೆ.

"If there is no struggle there is no progress"

ಕ್ರಿಮಿನಾಶಕ ಸಿಂಪಡಣೆಗೆ ತಂತ್ರಜ್ಞಾನ ಬಳಕೆ | ಹಣ, ಸಮಯ ಉಳಿತಾಯ

ಕೃಷಿ ಕ್ಷೇತ್ರಕ್ಕೂ ಕಾಲಿಟ್ಟ ಅತ್ಯಾಧುನಿಕ ಡ್ರೋನ್

• ಗುಡಿಬಂಡೆ ನವೀನ್

ಚಿಕ್ಕಬಳ್ಳಾಪುರ: ಕೃಷಿ ಕೂಲಿ ಕಾರ್ಮಿಕರ ಅಭಾವ, ಖರ್ಚು ವೆಚ್ಚವನ್ನು ಸರಿದೂಗಿಸಲು ಹಾಗೂ ಕ್ರಿಮಿನಾಶಕದಿಂದಾಗುವ ಸಮಸ್ಯೆಯನ್ನು ತಪ್ಪಿಸಿಕೊಳ್ಳಲು ಜಿಲ್ಲೆಯ ರೈತರು ಕೃಷಿ ಚಟುವಟಿಕೆಗೆ ಆಧುನಿಕ ತಂತ್ರಜ್ಞಾನವುಳ್ಳ ಡ್ರೋನ್ ಬಳಕೆ ಮಾಡಿ ಮಾದರಿ ಆಗಿದ್ದಾರೆ. ವಿಡಿಯೋ ಚಿತ್ರೀಕರಣ ಸೇರಿದಂತೆ ಹಲವು ಕ್ಷೇತ್ರದಲ್ಲಿ ಡ್ರೋನ್ ಬಳಕೆ ಮಾಡಲಾಗುತ್ತಿತ್ತು. ಅದೇ ರೀತಿ ಈಗ ಕೃಷಿ ಕ್ಷೇತ್ರದಲ್ಲೂ ಡ್ರೋನ್ ಬಳಕೆ ಮಾಡಲು ರೈತರು ಮುಂದಾಗಿದ್ದಾರೆ. ಜಿಲ್ಲೆಯ ಶಿಡ್ಲಘಟ್ಟ ತಾಲೂಕಿನ ಸಾದಲಿ ಗ್ರಾಮದ ಸುತ್ತಮುತ್ತಲು ರೈತರ ಜಮೀನಿನಲ್ಲಿ ಡ್ರೋನ್ ಬಳಕೆ ಮಾಡುತ್ತಿದ್ದಾರೆ. ರೈತ ಶ್ರೀನಿವಾಸ್ ಎಂಬವರು ಡ್ರೋನ್ ಮೂಲಕ ಆಲೂಗಡ್ಡೆ ಬೆಳೆಗೆ ಕ್ರಿಮಿನಾಶಕ ಸಿಂಪಡಣೆ ಮಾಡಿಸಿದ್ದಾರೆ. ↘೨



ಡ್ರೋನ್‌ನಲ್ಲಿ ಜಿಪಿಎಸ್

ಈ ಡ್ರೋನ್‌ನಲ್ಲಿ ಜಿಪಿಎಸ್ ಇದೆ. ಜಮೀನಿನ ಮ್ಯಾಪ್‌ನ್ನು ಡ್ರೋನ್‌ಗೆ ಅಳವಡಿಸಿದರೆ ಅದು ಆ ಜಮೀನನ್ನು ಬಿಟ್ಟು ಅಕ್ಕಪಕ್ಕದ ಜಮೀನಿಗೆ ಹೋಗುವುದಿಲ್ಲ ಎಂದು ಖಾಸಗಿ ಸಂಸ್ಥೆಯ ಡ್ರೋನ್ ನಿರ್ವಾಹಕ ರಬ್ಬಾನಿ ಹೇಳುವರು.

ರೈತ ಮಿತ್ರ ಡ್ರೋನ್

ಮಳೆ ಬಂದಾಗ ತೋಟದೊಳಗೆ ಕಾಲಿಡಲು ಸಾಧ್ಯವಾಗುವುದಿಲ್ಲ, ಕ್ರಿಮಿನಾಶಕ ಸಿಂಪಡಣೆ ಮಾಡದಿದ್ದರೆ

ಎರಡು ಮೂರು ದಿನದಲ್ಲಿ ಇಡೀ ತೋಟಕ್ಕೆ ಕ್ರಿಮಿ ಕೀಟಗಳು ಭಾದಿಸಬಹುದು. ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಎಂಬಂತೆ ಡ್ರೋನ್ ಕಾರ್ಯ ನಿರ್ವಹಿಸಲಿದೆ. ಡ್ರೋನ್ ಕೃಷಿಗೆ ಹೆಚ್ಚು ಸಹಕಾರಿಯಾಗಿದೆ ಎಂದು ಸಾದಲಿ ಗ್ರಾಮದ ರೈತ ಶ್ರೀನಿವಾಸ್ ಹೇಳಿದ್ದಾರೆ.

ಕೃಷಿ ಕ್ಷೇತ್ರಕ್ಕೂ ಕಾಲಿಟ್ಟ ಅತ್ಯಾಧುನಿಕ ಡ್ರೋನ್

೧↘ ಇದನ್ನು ಕಂಡ ಸುತ್ತಮುತ್ತಲಿನ ರೈತರು ಸಹ ಈಗ ಡ್ರೋನ್ ಮೊರೆ ಹೋಗಿದ್ದಾರೆ.

ಕಾರ್ಮಿಕರ ಸಮಸ್ಯೆಗೆ ಪರಿಹಾರ: ಒಂದೆಡೆ ಕೂಲಿಕಾರ್ಮಿಕರ ಸಮಸ್ಯೆ, ಮತ್ತೊಂದೆಡೆ ನುರಿತ ಕಾರ್ಮಿಕರ ಅಲಭ್ಯ. ಅಗತ್ಯಕ್ಕಿಂತ ಅನಗತ್ಯವಾಗಿ ಖರ್ಚಾಗುವ ಔಷಧಿ, ಇವೆಲ್ಲದಕ್ಕೂ ಪರಿಹಾರ ವಿನೂತನ ಮಾದರಿಯ ಡ್ರೋನ್ ಈ ಮೂಲಕ ರೈತರ ಬೆಳೆಗಳಿಗೆ ಕ್ರಿಮಿನಾಶಕ ಸಿಂಪಡಿಸುವ ಹೊಸ ಪ್ರಯತ್ನ ಯಶಸ್ವಿಯಾಗಿದೆ.

21-10-2021 Hd Pg 01

21-10-2021 Vv Pg 03

ಕೊಬ್ಬರಿ ಬೆಲೆ ಕ್ವಿಂಟಾಲ್‌ಗೆ 17,426 ರೂ.!

ತುಮಕೂರು: ತಿಪಟೂರು ಮಾರುಕಟ್ಟೆಯಲ್ಲಿ ಕೊಬ್ಬರಿಗೆ ಮತ್ತೆ ಉತ್ತಮ ಬೆಲೆ

ಸಿಕ್ಕಿದೆ. ಬುಧವಾರ ಎಪಿಎಂಸಿ ಹರಾಜಿನಲ್ಲಿ ಕ್ವಿಂಟಾಲ್ ಕೊಬ್ಬರಿಗೆ ಗರಿಷ್ಠ 17,426 ರೂ. ಸಿಕ್ಕಿದೆ. ಮಳೆ ಹಿನ್ನೆಯಲ್ಲಿ ಕೊಬ್ಬರಿ ಪೂರೈಕೆ ಕಡಿಮೆಯಾಗಿರುವುದು ದರ ಹೆಚ್ಚಳಕ್ಕೆ ಕಾರಣ ಎನ್ನಲಾಗಿದೆ. ಮಾರುಕಟ್ಟೆಗೆ ಒಟ್ಟು ಆವಕ 2527.54 ಕ್ವಿಂಟಾಲ್ ಬಂದಿದೆ. ಕಳೆದ ಮೇನಲ್ಲಿ ಗರಿಷ್ಠ 18,000 ರೂ., ದಾಖಲೆ ಬೆಲೆ ಸಿಕ್ಕಿತ್ತು. ಬಳಿಕ ಕೊಬ್ಬರಿ ಬೆಲೆ ಕನಿಷ್ಠ 15,000 ರೂ.ಗೆ ತಲುಪಿತ್ತು.

ಮಿತಿಮೀರಿದ ಕಳೆನಾಶಕ ಕಾರಣ: ಅಧಿಕಾರಿಗಳ ಹೇಳಿಕೆ

ಅಡಿಕೆಗೆ ಕಾಂಡ ರಸ ಸೋರುವ ರೋಗ

• ಕೆ.ಎಸ್.ವೀರೇಶ್ ಪ್ರಸಾದ್

ಸಂತೇಬೆನ್ನೂರು (ಚನ್ನಗಿರಿ ತಾ.): ಚನ್ನಗಿರಿ ತಾಲ್ಲೂಕಿನ ಹಲವೆಡೆ ಅಡಿಕೆಗೆ ವಿಚಿತ್ರ ರೋಗ ಕಂಡುಬಂದಿದ್ದು, ಇದೊಂದು ಕಾಂಡ ರಸ ಸೋರುವ ರೋಗ ಎಂದು ತೋಟಗಾರಿಕಾ ಇಲಾಖೆಯ ಅಧಿಕಾರಿಗಳು ಸಂಶಯ ವ್ಯಕ್ತಪಡಿಸಿದ್ದಾರೆ.

ಸಮೀಪದ ಭೀಮನೆರೆ ಗ್ರಾಮದ ರಂಗನಾಥ್ ಅವರ ಅಡಿಕೆ ತೋಟದಲ್ಲಿ ಮರದ ತುದಿಯ ಎಲೆಗಳು ಒಣಗುತ್ತಿವೆ. ಅಡಿಕೆ ಕುಂಚದಲ್ಲಿ ಕಾಯಿಗಳು ಉದುರುತ್ತಿವೆ. ಬುಡದ ಕಾಂಡದಲ್ಲಿ ಅಂಟಿನಂತಹ ಬಿಳಿ ದ್ರವ ಒಸರುತ್ತಿದೆ. ಚಿಕ್ಕ ಚಿಕ್ಕ ರಂಧ್ರಗಳ ಮೂಲಕ ರಸ ಜಿನುಗುತ್ತಿರುವ ಭಾಗದಲ್ಲಿ ಮುಟ್ಟಿದರೆ ಮೆತ್ತಗಾದ ಅನುಭವವಾಗುತ್ತಿದೆ. ಗಡಸುತನ ಕಳೆದುಕೊಳ್ಳುವ ಭೀತಿ

ಅಡಿಕೆ ಮರದ ಬುಡದ ಕಾಂಡದಲ್ಲಿ ಬಿಳಿ ರಸ ಒಸರುತ್ತಿರುವುದು

ಪ್ರಜಾವಾಣಿ ವಿಶೇಷ

ಉಂಟಾಗಿದೆ.

‘ಫಸಲಿಗೆ ಬಂದ ನಾಲ್ಕೈದು ಮರಗಳಲ್ಲಿ ಈ ಲಕ್ಷಣ ಕಂಡುಬಂದಿದೆ. ಪಕ್ಕದ ಮರಗಳಿಗೂ ಹಬ್ಬುವ ಲಕ್ಷಣಗಳು ಕಾಣುತ್ತಿವೆ. 1,400 ಅಡಿಕೆ ಗಿಡಗಳು ಇದ್ದು, ಸಮಸ್ಯೆಯಾಗಿದೆ. ಈಗಾಗಲೇ ಗೇಣಿಗೆ ನೀಡಲಾಗಿದ್ದು, ಅಡಿಕೆ ಕೊಯ್ಲು ನಡೆಯುತ್ತಿದೆ. ತೋಟದಲ್ಲಿ ಏಕಾಏಕಿ ವಿಚಿತ್ರ ರೋಗದ ಲಕ್ಷಣ ಕಾಣಿಸಿಕೊಂಡಿರುವುದು ಭಯ ಉಂಟುಮಾಡಿದೆ’ ಎಂದು ರೈತ ರಂಗನಾಥ್ ತಿಳಿಸಿದ್ದಾರೆ.

ಆರಂಭದಲ್ಲಿ ಕಾಂಡ ರಸ ಸೋರುವ ರೋಗದಂತೆ ಕಂಡುಬಂದರೂ ಮುಂದೆ ಇದು ಅಣಬೆ ರೋಗಕ್ಕೆ ತಿರುಗಬಹುದು. ಈ ರೋಗವನ್ನು ನಿಯಂತ್ರಿಸಬಹುದು.

ರೋಹಿತ್, ಹಿರಿಯ ತೋಟಗಾರಿಕಾ ಅಧಿಕಾರಿ, ಚನ್ನಗಿರಿ

‘ಕಾಂಡ ರಸ ಸೋರುವ ರೋಗ ಮಿತಿಮೀರಿದ ಕಳೆನಾಶಕ ಹಾಗೂ ರಾಸಾಯನಿಕ ಬಳಕೆಯಿಂದ ಬರುತ್ತದೆ. ಮಣ್ಣಿನಲ್ಲಿನ ಉಪಯುಕ್ತ ಬ್ಯಾಕ್ಟೀರಿಯಾ ನಾಶಗೊಳ್ಳುವುದರಿಂದ ರೋಗ ಉಲ್ಬಣಿಸುತ್ತದೆ. ಕಪ್ಪು ಮಣ್ಣಿನಲ್ಲಿ ಹೆಚ್ಚಾಗಿ ಕಂಡುಬರುವುದರಿಂದ ಮಣ್ಣಿನ ನಿರ್ವಹಣೆ ಮೂಲಕ ರೋಗ ನಿವಾರಿಸಬಹುದು’ ಎಂದು ಚನ್ನಗಿರಿಯ ಹಿರಿಯ ತೋಟಗಾರಿಕಾ ಅಧಿಕಾರಿ ರೋಹಿತ್ ಸಲಹೆ ನೀಡಿದರು. ಈ ರೋಗಕ್ಕೆ 2 ಎಂ.ಎಲ್ ಎಕ್ಸಾಕೊನೊಜೋಲ್ ಅನ್ನು ಪ್ರತಿ ಲೀಟರ್ ನೀರಿಗೆ ಮಿಶ್ರಣ ಮಾಡಿ ಒಂದು ಗಿಡದ ಬುಡಕ್ಕೆ 5 ಲೀಟರ್ ಹಾಕಬೇಕು. ಟ್ರೈಕೊಡರ್ಮಾ, ಸುಡೊಮಾನಸ್, ವ್ಯಾಮ್ ಇತ್ಯಾದಿ ಜೈವಿಕ ರೋಗ ನಿಯಂತ್ರಕಗಳನ್ನು ಬಳಸಬೇಕು.

21-10-2021 Pv Pg 04